ದಿ: ೧೭.೦೩.೨೦೨೩ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀ ಎ.ಜಿ.ಎನ್. ವಕೀಲರಿಂದ,

ಜೋಗಪ್ಪ ಇವರು ನಮ್ಮ ಕುಟುಂಬದ ಮೂಲ ಪುರುಷ ಎಂದರೆ ಸರಿ. ಅವರಿಗೆ ಮೂರು ಜನ ಗಂಡು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪ ಎನ್ನುವವರು ಗೊತ್ತು. ಅವರು ಜೋಗಪ್ಪನ ಮಗ ಎಂದರೆ ಸರಿ. ಮುನಿಯಪ್ಪನಿಗೆ ದೊಡ್ಡಮುನಿಶ್ಯಾಮಪ್ಪ , ಚಿಕ್ಕಮುನಿಶ್ಯಾಮಪ್ಪ ಎಂಬ ಸಹೋದರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಜೋಗಪ್ಪನ ಮಕ್ಕಳು ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಮಾಡಿಕೊಂಡಿರುವ ಕುರಿತು ನನಗೆ ಗೊತ್ತಿಲ್ಲ. ಮುನಿಯಪ್ಪನಿಗೆ ನಮ್ಮ ತಾತನ ಭಾಗದಿಂದ ಆಸ್ತಿ ಬಂದಿರುತ್ತದೆ. ಮತ್ತು ಕೋರ್ಟಿನಲ್ಲಿ ವಿಭಾಗ ಆಗಿದೆ ಎಂದು ಗೊತ್ತಾಗಿದೆ. ಸದರಿ ದಾವೆ ಯಾರ ಮಧ್ಯ ನಡೆಯಿತು ಎಂದು ನನಗೆ ಗೊತ್ತಿಲ್ಲ.

೧೯೬೨ರಲ್ಲಿ ದೊಡ್ಡಮುನಿಶ್ಯಾಮಪ್ಪ, ಮುನಿಯಪ್ಪ, ಚಿಕ್ಕಮುನಿಶ್ಯಾಮಪ್ಪ ಅವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾರಿಗೆ ಎಷ್ಟು ಎಂದು ಕೋರ್ಟಿನಲ್ಲಿ ತೀರ್ಮಾನ ಆಗಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಪ್ರಕರಣ ನಡೆದು ಅದರಲ್ಲಿ ಈ ಸರ್ವೆ ನಂ.೩/೨ ಕೂಡ ಒಂದು ಎಂದರೆ ಸರಿ. ನ್ಯಾಯಾಲಯದಲ್ಲಿ ಸರ್ವೆ ನಂ.೩/೨ ರಲ್ಲಿ ಎಲ್ಲರಿಗೂ ಸಮಪಾಲು ಎಂದು ಘೋಷಣೆ ಆಗಿತ್ತು ಎಂದರೆ ಸರಿ. ನ್ಯಾಯಾಲಯದ ಆದೇಶದ ನಂತರ ಯಾರ್‍ಯಾರಿಗೆ ಯಾವ ಕಡೆ ಎಂದು ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ವಿಭಾಗ ಮಾಡಿಕೊಳ್ಳಲು ಆಗದೇ ಇದ್ದುದ್ದರಿಂದ ಮೂರು ಜನ ಅಣ್ಣ ತಮ್ಮಂದಿರು ಬೇರೆ ಬೇರೆ ಆಗಿದ್ದರು ಎಂದರೆ ಸರಿ. ಹಾಗಾಗಿ ಅವರು ಸ್ವಲ್ಪ ಸ್ವಲ್ಪ ವಿಸ್ತೀರ್ಣದಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ಮೂರು ಜನ ಅಣ್ಣ ತಮ್ಮಂದಿರು ತಾವು ಉಳುಮೆ ಮಾಡುವ ರೀತಿಯಂತೆ ರೆವಿನ್ಯೂ ದಾಖಲೆಗಳನ್ನು ಮಾಡಲು ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

ವಿಭಾಗ ಮಾಡಿಕೊಂಡಿರುವ ದಾಖಲೆಯನ್ನು ನೋಡಿದ್ದೇನೆ. ಅವರು ಉಳುಮೆ ಮಾಡುವ ವಿಸ್ತೀರ್ಣಕ್ಕೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೂರು ಜನ ಅಣ್ಣ ತಮ್ಮಂದಿರು ಎರಡು ಎಕರೆ ಆರು ಗುಂಟೆ ವಿಸ್ತೀರ್ಣವನ್ನು ಪೂರ್ವ ಪಶ್ಚಿಮವಾಗಿ ಮೂರು ಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಭಾಗ ಮಾಡಿಕೊಳ್ಳುವ ಮೊದಲೇ ೨೭ ಗುಂಟೆ ಜಮೀನನ್ನು ಹರಿಜನ ಕಾಲೋನಿಗೆ ಸ್ವಾಧೀನಪಡಿಸಿಕೊಳ್ಳಲಾಗಿತ್ತು ಎಂದರೆ ಸರಿ. ಅದು ಪಶ್ಚಿಮದ ಕಡೆ ಎಂದರೆ ಸರಿ. ವಿಭಾಗ ಮಾಡಿಕೊಳ್ಳುವಾಗ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಸೇರಿಸಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ರೀತಿ ಸ್ವಾಧೀನ ಪಡಿಸಿಕೊಂಡಿರುವ ಜಮೀನನ್ನು ವಿಭಾಗ ಮಾಡಿಕೊಂಡಿರುವ ಆಸ್ತಿಗಳಂತೆ ರೆವಿನ್ಯೂ ದಾಖಲೆಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿ. ಹಾಗೆ ವಿಭಾಗ ಮಾಡಿಕೊಂಡಿರುವುದರಲ್ಲಿ ಚಿಕ್ಕಮುನಿಶ್ಯಾಮಪ್ಪನಿಗೆ ೨೫ ಗುಂಟೆ, ನಂಜಪ್ಪನಿಗೆ ೨೯ ಗುಂಟೆ, ಮುನಿಯಪ್ಪನಿಗೆ ೨೯ ಗುಂಟೆ ಜಮೀನು ಬಂದಿದೆ ಎಂದರೆ ನನಗೆ ಗೊತ್ತಿಲ್ಲ.

ಸರ್ಕಾರಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಸೇರಿಸಿ ವಿಭಾಗ ಮಾಡಿಕೊಂಡು, ದಾಖಲೆಗಳನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಕುರಿತು ನಾವು ಎ.ಸಿ, ಡಿ.ಸಿ, ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇವು ಎಂದರೆ ನನಗೆ ಗೊತ್ತಿಲ್ಲ. ಆಗ ಪ್ರತಿವಾದಿಯರು ಸದರಿ ಪ್ರಕರಣಗಳ ವಿರುದ್ದ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಷ್ಟು ವಿಸ್ತೀರ್ಣಕ್ಕೆ ವಾಸ್ತಾಂಶದಲ್ಲಿ ಹೊಂದಾಣಿಕೆ ಆಗದೇ ಇದ್ದುದ್ದರಿಂದ ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಅಪೀಲು ಸಂಖ್ಯೆ ೮೪-೨೦೧೩-೧೪ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ಪಕ್ಷಗಾರಳಿದ್ದು, ನಮ್ಮ ಪರವಾಗಿ ವಕೀಲರನ್ನು ನೇಮಿಸಿ, ನ್ಯಾಯಾಲಯಕ್ಕೆ ಹಾಜರಾಗಿದ್ದೇ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಹಳೆ ಹಿಸ್ಸೆಗಳನ್ನು ರದ್ದುಪಡಿಸಿ, ಸರ್ವೆ ನಂಬರ್ ೩/೨ ಎಂದು ಆಗಿದೆ ಎಂದರೆ ಸರಿ. ನಂತರ ಈ ವರ್ಷದ ಪಹಣಿಯಲ್ಲಿ ಎಲ್ಲರ ಹೆಸರುಗಳು ಒಟ್ಟುಗೂಡಿಸಿ ಆಗಿದೆ ಎಂದರೆ ಸರಿ.

ಬೈಯಮ್ಮ ಮತ್ತು ಇವರ ತಂದೆ ಮುನಿಯಪ್ಪ ಇವರು ಸರ್ವೆನಂ.೩/೨ ರಲ್ಲಿ ೧೯ ಗುಂಟೆಗೆ ಮಾತ್ರ ಹಕ್ಕವುಳ್ಳವರು ಆಗಿದ್ದರು ಎಂದರೆ ಸರಿಯಲ್ಲ. ಮುನಿಯಪ್ಪ ಇವರಿಗೆ ೧ ಎಕರೆ ೧೮ ಗುಂಟೆ ವಿಸ್ತೀರ್ಣಕ್ಕೆ ದಾನ ಪತ್ರ ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ೧೯ ಗುಂಟೆಗೆ ಹಕ್ಕು ಇದ್ದರು ಸಹ ಒಂದು ಎಕರೆ ೧೮ ಗುಂಟೆಗೆ ಸುಳ್ಳು ದಾನ ಪತ್ರ ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ೧೯ ಗುಂಟೆಗೆ ಹಕ್ಕು ಇದೇ ಎಂದು ಗೊತ್ತಿದ್ದರು ಸಹ ಮುನಿಯಪ್ಪ ಇವರು ಸುಳ್ಳು ದಾನ ಪತ್ರ ಸೃಷ್ಟಿಸಿ, ಬೈಯಮ್ಮ ಇವರ ಹೆಸರಿಗೆ ನೊಂದಣಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಒಂದು ಎಕರೆ ೧೮ ಗುಂಟೆಗೆ ಆಗಿರುವ ರೆವಿನ್ಯೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೈಯಮ್ಮ ಇವರು ನಮಗೆ ದಾನ ಪತ್ರ ಬರೆದುಕೊಡುವ ಮೊದಲು ಸದರಿ ಆಸ್ತಿಯಲ್ಲಿ ಹಲವಾರು ಜನರಿಗೆ ಕ್ರಯ ಮಾಡಿದ್ದಾರೆ ಎಂದರೆ ಸರಿ. ಸುಮಾರು ೧೦ ರಿಂದ ೧೧ ಜನರಿಗೆ ಒಂದು ಒಂದುವರೆ ಗುಂಟೆಯಂತೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಹಾಗೆ ಕ್ರಯಕ್ಕೆ ಪಡೆದವರು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಒಂದು ಒಂದುವರೆ ಗುಂಟೆ ಕ್ರಯಕ್ಕೆ ಪಡೆದಿರುವವರ ಚಕ್ಕುಬಂದಿ ಹೇಳಲಾಗುವುದಿಲ್ಲ. ಮುನಿಯಪ್ಪರವರಿಗೆ ಬಂದಿರುವ ಜಮೀನಿನ ಪಶ್ಚಿಮ ಭಾಗಕ್ಕೆ ಮಾರಾಟ ಮಾಡಿದ್ದಾರೆ. ಬೈಯಮ್ಮ ರವರು ಪೂರ್ವದ ಕಡೆಗೆ ಜಮೀನು ಉಳಿಸಿಕೊಂಡಿದ್ದರು. ಮಾರಾಟ ಮಾಡಿ, ಬೈಯಮ್ಮ ಇವರಿಗೆ ೨೯ ಗುಂಟೆ ಇತ್ತು. ೨೯ ಗುಂಟೆ ಉಳಿಕೆ ಜಮೀನಿನ ಚಕ್ಕುಬಂದಿ ಪೂ-ಪಾರ್ವತಮ್ಮ ಸ್ವತ್ತು, ಪ-ನಂಜಮ್ಮ ಸ್ವತ್ತು, ಉತ್ತರಕ್ಕೆ-ಚಿಕ್ಕಲ್ಲಪ್ಪ ಸ್ವತ್ತು, ದಕ್ಷಿಣಕ್ಕೆ-ನಾಗರಾಜಪ್ಪ ಸ್ವತ್ತು ಇರುತ್ತದೆ. ಈಗ ಮೇಲೆ ಹೇಳಿಕೆ ಚಕ್ಕುಬಂದಿಯ ಮಧ್ಯದಲ್ಲಿ ನಮ್ಮ ಆಸ್ತಿ ಇದೆ. ಉಳಿಕೆ ೨೯ ಗುಂಟೆ ಜಮೀನು ಬೈಯಮ್ಮನ ಹೆಸರಿಗೆ ಇರುವ ಕುರಿತು ದಾಖಲೆಗಳನ್ನು ನಮ್ಮ ವಕೀಲರ ಬಳಿ ನೀಡಿದ್ದೇನೆ. ಒಂದು ಎಕರೆ ೧೬ ಗುಂಟೆ ಉಳಿಕೆ ಜಮೀನಿನ ದ- ಚಿಕ್ಕಮುನಿಸ್ವಾಮಪ್ಪ ರವರ ಜಮೀನು, ಉತ್ತರದ ಕಡೆ-ಮುನಿಯಪ್ಪನ ಭಾಗಕ್ಕೆ, ಅದರ ಉತ್ತರ ದಿಕ್ಕಿಗೆ ನಂಜಪ್ಪ ಇವರ ಭಾಗಕ್ಕೆ ಆಸ್ತಿ ಬಂದಿದೆ ಎಂದರೆ ಸರಿಯಲ್ಲ. ಇವತ್ತಿಗೂ ಕೂಡ ಅವರು ಪೂರ್ವ ಪಶ್ಚಿಮ ವಿಭಾಗ ಮಾಡಿಕೊಂಡಿರುವ ರೀತಿಯಲ್ಲಿ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಪೂರ್ವ ಪಶ್ಚಿಮವಾಗಿ ವಿಭಾಗ ಆಗಿರುವ ಆಸ್ತಿಯನ್ನು ಬೈಯಮ್ಮ ಇವರು ನಮಗೆ ಉತ್ತರ ದಕ್ಷಿಣವಾಗಿ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಹಾಗೆ ಉತ್ತರ ದಕ್ಷಿಣವಾಗಿ ಮಾಡಿಕೊಂಡಿರುವ ದಾಖಲೆಯಲ್ಲಿ ನಂಜಪ್ಪ ಇವರ ಜಮೀನನ್ನು ಸೇರಿಸಿ ದಾಖಲೆ ಮಾಡಿಕೊಂಡಿದ್ದೇವೆ ಎಂದರೆ

ಸರಿಯಲ್ಲ. ಹಾಗೆ ಮಾಡಿಕೊಂಡಿರುವ ದಾಖಲೆ ಮೇರೆಗೆ ನಂಜಪ್ಪ ಇವರ ಸ್ವಾಧೀನಕ್ಕೆ ನಾವು ಅಡ್ಡಿಪಡಿಸಿದ್ದೇವೆ ಎಂದರೆ ಸರಿಯಲ್ಲ. ಅದಾದ ನಂತರ ಅವರು ನಮ್ಮ ವಿರುದ್ದ ಸಿವಿಲ್ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದಾದ ನಂತರ ನಾನು ಮತ್ತು ನನ್ನ ಸಹೋದರಿಯರು ಪ್ರತಿವಾದಿಯ ವಿರುದ್ದ ಕೇಸುಗಳನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ವಿರುದ್ದ ದಾವೆ ಸಲ್ಲಿಸಿದ ನಂತರ ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅವರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸಲ್ಲಿಸಿರುವ ದಾವೆಗಳು ಇನ್ನು ಚಾಲ್ತಿಯಲ್ಲಿದೆ ಎಂದರೆ ಸರಿ.

ಪೂರ್ತಿ ಜಮೀನಿನ ಉತ್ತರದ ಕಡೆ ೧ನೇ ಪ್ರತಿವಾದಿ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಸರಿಯಲ್ಲ. ಪೂರ್ತಿ ಜಮೀನಿನ ಉತ್ತರದ ಕಡೆಗೆ ೧ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ರಾಗಿ ಬೆಳೆ ಕಟಾವು ಮಾಡುತ್ತಿದ್ದಾರೆ ಎಂದು ಪೊಲೀಸ ಪ್ರೋಟೆಕ್ಷನ ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿ. ಅಷ್ಟೋತ್ತಿಗೆ ೧ನೇ ಪ್ರತಿವಾದಿ ರಾಗಿ ಬೆಳೆಯನ್ನು ಕಟಾವು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಹಾಗಾಗಿ ಸದರಿ ಅರ್ಜಿ ವಜಾ ಆಯಿತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನದಲ್ಲಿ ಯಾವತ್ತಿಗೂ ತಾವು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸೃಷ್ಟಿಸಿದ ದಾಖಲೆಗಳ ಆಧಾರದ ಮೇರೆಗೆ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ, ದಾನ ಪತ್ರದಲ್ಲಿ ತಿಳಿಸಿರುವ ಆಸ್ತಿಯ ಚಕ್ಕುಬಂದಿಯಲ್ಲಿ ನಾವು ಸ್ವಾಧೀನದಲ್ಲಿಲ್ಲ, ಅದು ಪ್ರತಿವಾದಿಯರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಈ ರೀತಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರಿಂದ ದಾನ ಪತ್ರದಲ್ಲಿ ಮುನಿಯಪ್ಪ ಮತ್ತು ಬೈಯಮ್ಮರವರಿಗೆ ಆಸ್ತಿ ಹೇಗೆ ಬಂತು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ.

ಬೈಯಮ್ಮ ನಾನು ಮತ್ತು ನನ್ನ ಸಹೋದರಿಯರು ಸೇರಿ ಪ್ರತಿವಾದಿಯರ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.೩ ಮತ್ತು ೪ ಪಹಣಿ ಈಗ ಚಾಲ್ತಿಯಲ್ಲಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈಗ ನಾನು ಮೇಲೆ ಹೇಳಿದಂತೆ ವಿಷಯಗಳು ನನಗೆ ಗೊತ್ತಿದ್ದರು ಸಹ ಅದನ್ನು ವಾದ ಪತ್ರದಲ್ಲಿ ತಿಳಿಸದೇ ಸತ್ಯಾಂಶ ಮರೆಮಾಚಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸೃಷ್ಟಿಸಿಕೊಂಡಿದ್ದರಿಂದ ಮತ್ತು ನಾವು ದಾವಾ ಆಸ್ತಿಯ ಸ್ವಾಧೀನದಲ್ಲಿಲ್ಲದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿಲ್ಲ, ಮತ್ತು ಬೆಳೆ ಬೆಳೆಯದ ಕಾರಣ ಪಹಣಿಯಲ್ಲಿ ನಮೂದು ಮಾಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವರ್ಷಕ್ಕೆ ಮೂರು ನಾಲ್ಕು ಬೆಳೆ ಬೆಳೆಯುತ್ತೇವೆ ಅದಕ್ಕೆ ನಮೂದು ಮಾಡಿಸಿಲ್ಲ ಎನ್ನುತ್ತಾರೆ. ನಾವು ವರ್ಷಕ್ಕೆ ಮೂರು ಬೆಳೆ ಬೆಳೆಯುವುದಿಲ್ಲ ಎಂದರೆ ಸರಿಯಲ್ಲ.

ವಾದ ಪತ್ರದಲ್ಲಿ ತೋರಿಸಿರುವ ಚಕ್ಕುಬಂದಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತಿಳಿಸಿರುವ ಚಕ್ಕುಬಂದಿ ಮತ್ತು ಹಿಸ್ಸೆ ಡಿ.ಡಿ.ಎಲ್.ಆರ್ ಆದೇಶದ ಮೇರೆಗೆ ರದ್ದುಗೊಂಡಿದೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಪ್ರತಿವಾದಿ ಪರವಾಗಿ ಶ್ರೀ ಎ.ಜಿ.ಎನ್. ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

3 17.03.2023 O.S 398-2014 of P.W.1